ಭಕ್ತಿಯಿಂದ ಮಾಡುವ ಕಾಯಕ. ಅದರಿಂದ ಬರುವ ಫಲಾಫಲ ಭಗವಂತನ ಪ್ರಸಾದ. 'ಉರಿ ಬರಲಿ, ಸಿರಿ ಬರಲಿ' ಅದೆಲ್ಲ ಅವನ ಕೃಪೆ, ಆಶೀರ್ವಾದ, ಕರುಣೆ. ಇದೇ ಸಿದ್ಧಾಂತವನ್ನು ಶ್ರೀಅರವಿಂದರು ತಮ್ಮ ಪೂರ್ಣಯೋಗದಲ್ಲಿ ಪ್ರತಿಪಾದಿಸಿದ್ದಾರೆ. ಅವರ ಆಶ್ರಮ ಪೂರ್ಣಯೋಗದ ಪ್ರಯೋಗಶಾಲೆ. ಅಲ್ಲಿ ಪ್ರತಿಯೊಬ್ಬ ಸಾಧಕನೂ ತನ್ನ ಒಲವಿನ ಕರ್ಮ(ಕಾಯಕ) ಮಾಡಲೇ ಬೇಕು. ಕವಿತೆ ರಚಿಸುವ, ಚಿತ್ರಬರೆಯುವ, ಕೆತ್ತನೆ ಕೆಲಸ ಮಾಡುವ, ನರ್ತಿಸುವ, ಸಂಗೀತ ಹಾಡುವ, ಅಡುಗೆ ಮಾಡುವ, ಕೊನೆಗೆ ಆಟ ಆಡುವ ಎಲ್ಲ ಕೆಲಸವನ್ನೂ ಮಾಡಲೇ ಬೇಕು. ಆ ಮೂಲಕ ಆ ಸರ್ವರಲ್ಲೂ ಇರುವ ಆ ದೈವೀಶಕ್ತಿಯನ್ನು ಆರಾಧಿಸಬೇಕು—ಅಲ್ಲಿ ಸೋಮಾರಿಗಳಿಗೆ ಎಡೆಯಿಲ್ಲ.

"ಹೀಗೆ ಸಾಧನೆ ಮಾಡಬೇಕಾದರೆ ಈ ಲೋಕವನ್ನು ತ್ಯಜಿಸಿ ಮತ್ತೆಲ್ಲಿಗಾದರೂ ಹೋಗಿ ಏನು ಮಾಡುವುದು? ಆದ್ದರಿಂದ ಶರಣರು 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ' ಎಂದು ಇಹಲೋಕವನ್ನು ತಮ್ಮ ಸಾಧನೆಯ ರಂಗವನ್ನಾಗಿ ಮಾಡಿಕೊಂಡರು. ಈ ದೇಹವನ್ನು ಆ ಸತ್‌ಶಕ್ತಿಯ ಉಪಕರಣ ಎಂದು ದೇಹದಂಡನೆಯನ್ನು ಖಂಡಿಸಿದರು. 'ಹುತ್ತವ ಬಡಿದರೆ ಹಾವು ಸಾಯಬಲ್ಲುದೆ?' ಎಂದು ಕೇಳಿದರು. ಶ್ರೀಅರವಿಂದರು : 'God does not yield to hunger strike' (ದೇವರು ಉಪವಾಸ ಸತ್ಯಾಗ್ರಹಕ್ಕೆ ಮಣಿಯುವುದಿಲ್ಲ) ಎಂದಿದ್ದಾರೆ. ಈ ದೃಷ್ಟಿಯಿಂದ ಶಿವಯೋಗ, ಪೂರ್ಣಯೋಗ ಬಹು ಸಾಮ್ಯ.

"ಈಗ ಕೊನೆಯ ಮಾತಿಗೆ ಬರೋಣ. ಜೀವನದ ಉದ್ದೇಶ ಸುಖಪ್ರಾಪ್ತಿಯೆ ಎಂಬುದು. ಈ ಯೋಗಸಾಧನೆಯಿಂದ ಅದು ಹೇಗೆ ಪ್ರಾಪ್ತಿಯಾಗುತ್ತದೆ? ಇಹಲೋಕ ಸುಖಕ್ಕೆ ಬೇಕಾದ ಸಂಪತ್ತನ್ನು ಅನಾಮತ್ತಾಗಿ ತಿರಸ್ಕರಿಸುವುದರಿಂದಲೇ ಅದು ಪ್ರಾಪ್ತಿಯಾಗುವುದಿಲ್ಲ, ಈ ಇಹಲೋಕದ ಸುಖಹೀನತೆ ದೈವ ಸಾಕ್ಷಾತ್ಕಾರವಲ್ಲ ಎನ್ನುತ್ತದೆ ಪೂರ್ಣಯೋಗ. ಇದನ್ನು ಸಾಧನೆ ಮಾಡುವುದರಿಂದ ಸರ್ವರಲ್ಲೂ ಇರುವ ಆ ದೈವವನ್ನು 'ಆತ್ಮಸಾತ್' ಮಾಡಿಕೊಂಡಾಗ ಅದಕ್ಕಿಂತ ಹೆಚ್ಚಿನ ಸಂತೋಷ ಇನ್ನೇನಿದೆ?" ಎಂದು ಮಾತು ಮುಗಿಸಿದೆ. ◆

## ಪ್ರಹಸನ ಪ್ರಸಂಗ

ಒಬ್ಬ ವ್ಯಕ್ತಿಯು ಕೆಲಸದಿಂದ ಮನೆಗೆ ಹಿಂದಿರುಗುವಾಗ ಒಂದು ಸುಂದರ ಬೊಂಬೆಯನ್ನು ತಂದನು. ಅವನ ಮಗ, ಮಗಳು ಎಲ್ಲ ಎಲ್ಲ "ನನಗೆ, ನನಗೆ" ಎಂದು ಓಡಿಬಂದರು.

ತಂದೆ : "ಈ ಬೊಂಬೆ ಯಾರಿಗೆ ಎಂದರೆ, ಯಾರು ತಾಯಿ ಹೇಳಿದಂತೆ ಕೇಳುತ್ತಾರೊ, ಅವಳಿಗೆ ಎದುರುತ್ತರ ನೀಡುವುದಿಲ್ಲವೊ, ಅವಳು ಹೇಳಿದ ಕೆಲಸವನ್ನೆಲ್ಲ ಮಾಡುತ್ತಾರೊ ಅವರಿಗೆ."

ಹಿರಿಯ ಮಗು : "ಅಪ್ಪ, ಹಾಗಾದರೆ ಆ ಬೊಂಬೆ ನಿನಗೇ ಸೇರಬೇಕು."

ನಾವು, ಇತರರಿಗೆ ಇತರ ವಸ್ತುಗಳಿಗೆ ಎಷ್ಟು ಗುಲಾಮರಾಗಿರುತ್ತೇವೆಂಬುದು ನಮಗೇ ತಿಳಿದಿರುವುದಿಲ್ಲ—ಗುಲಾಮತನ ಅಷ್ಟೊಂದು ಸ್ವಾಭಾವಿಕವಾಗಿರುತ್ತದೆ. ಇದನ್ನು ಅರಿಯಬೇಕಾದರೆ ನಮ್ಮ ಮಾತು ಕೃತಿ ಆಲೋಚನೆಗಳನ್ನು ಚೆನ್ನಾಗಿ ವಿಮರ್ಶಿಸಿ ನೋಡಬೇಕು.

❁ ❁ ❁

ಭಾರತದ ಭವೇಶನು ತನ್ನ ಕುಟುಂಬ ಸಮೇತನಾಗಿ ಮಧ್ಯಪೂರ್ವ ದೇಶಗಳ ಪ್ರವಾಸ ಕೈಗೊಂಡಿದ್ದನು. ಕ್ರೈಸ್ತರು, ಮುಸ್ಲಿಮರು, ಯಹೂದಿಗಳೆಲ್ಲರಿಗೂ ಅತ್ಯಂತ ಪವಿತ್ರ ಸ್ಥಳವಾದ ಜೆರೂಸಲೇಮ್‌ಗೆ ಅವನು ಭೇಟಿಯಿತ್ತನು. ಆ ಪವಿತ್ರ ಸ್ಥಳದಲ್ಲಿಯೇ ಅವನ ಮುದಿ ಅತ್ತೆ (ಪತ್ನಿಯ ತಾಯಿ) ಮೃತಪಟ್ಟಳು. ಭವೇಶನು ಭಾರತ ರಾಯಭಾರಿ ಕಚೇರಿಗೆ ಹೋಗಿ, ಅತ್ತೆಯ ಮೃತದೇಹವನ್ನು ಶವಸಂಸ್ಕಾರಕ್ಕಾಗಿ ಭಾರತಕ್ಕೆ ಕಳಿಸಬೇಕಾಗಿದೆಯೆಂದು ತಿಳಿಸಿದನು.

ಅಲ್ಲಿಯ ಅಧಿಕಾರಿಗಳು ತಿಳಿಸಿದರು : "ಅಲ್ಲಿಗೆ ಕಳಿಸುವುದಕ್ಕೆ ೫೦೦೦ ಡಾಲರ್ ಖರ್ಚಾಗುತ್ತದೆ. ಇಲ್ಲಿಯೇ ಶವಸಂಸ್ಕಾರ ಮಾಡುವುದಾದರೆ ಕೇವಲ ೧೫೦ ಡಾಲರ್‌ನಲ್ಲಿ ಎಲ್ಲ ಮುಗಿಯುತ್ತದೆ. ಇಲ್ಲಿಯೇ ಶವಸಂಸ್ಕಾರ ಮಾಡಬಹುದಲ್ಲ?"

ಭವೇಶ ಹೇಳಿದ : "ಎಷ್ಟೇ ಖರ್ಚಾದರೂ ಪರವಾಗಿಲ್ಲ, ಭಾರತದ ನಮ್ಮೂರಲ್ಲೇ ಶವಸಂಸ್ಕಾರವಾಗಬೇಕು. ಏಕೆಂದರೆ ಅಲ್ಲಿ ಅಗ್ನಿ ಸಂಸ್ಕಾರದ ಪದ್ಧತಿ ಇದೆ."

ಅಧಿಕಾರಿ : "ಸತ್ತಮೇಲೆ ಯಾವ ಸಂಸ್ಕಾರವಾದರೇನು? ಅಷ್ಟೊಂದು ಹಣ ಉಳಿಯುವಾಗ ಇಲ್ಲಿಯೇ ಶವಸಂಸ್ಕಾರ ಮಾಡಿದರಾಯಿತು!"

ಭವೇಶ : "ನನಗೆ ಹಣ ಉಳಿಯುವುದು ಮುಖ್ಯವಲ್ಲ, ಅಗ್ನಿಸಂಸ್ಕಾರ ಮುಖ್ಯ."

ಅಧಿಕಾರಿ : "ನೀವು ಇಷ್ಟೊಂದು ಹಣವನ್ನು ವೆಚ್ಚ ಮಾಡಲು ಸಿದ್ಧವಿರುವುದನ್ನು ನೋಡಿದರೆ, ನಿಮ್ಮ ಅತ್ತೆಯನ್ನು ನೀವು ತುಂಬ ಪ್ರೀತಿಸುತ್ತೀರೆಂದು ಕಾಣುತ್ತದೆ."

ಭವೇಶ : "ಹಾಗೇನಿಲ್ಲ. ಬಹಳ ಹಿಂದೆ ಈ ಜೆರೂಸಲೇಮಿನಲ್ಲಿ ಹೂಳಲ್ಪಟ್ಟ ವ್ಯಕ್ತಿ ಮೂರೇ ದಿನಗಳಲ್ಲಿ ಮೇಲೆದ್ದು ಬಂದ ಕಥೆ ಓದಿದ್ದೇನೆ. ಈಗಲೂ ಹಾಗೇನಾದರೂ ಆಗಿಬಿಟ್ಟರೆ ಎಂಬ ಭಯ ಅಷ್ಟೇ."

ಈ ಕಥೆಯಲ್ಲಿ ಬರುವ ಮುದಿ ಅತ್ತೆ ನಮ್ಮ ಹಳೆಯ ಸಂಸ್ಕಾರಗಳನ್ನು ಪ್ರತಿನಿಧಿಸುತ್ತಾಳೆ. ಈ ಸಂಸ್ಕಾರಗಳು ನಮ್ಮ ಸುಪ್ತಪ್ರಜ್ಞೆಯ ಆಳದಲ್ಲಿ ಹೂಳಲ್ಪಟ್ಟಿರುತ್ತವೆ, ಅಂದರೆ ಅದುಮಿಡಲ್ಪಟ್ಟಿರುತ್ತವೆ. ಅವು ಅನುಕೂಲ ಸನ್ನಿವೇಶದಲ್ಲಿ ವೃತ್ತಿರೂಪದಲ್ಲಿ ಮೇಲೇಳಬಹುದು ಮತ್ತು ಕ್ರಿಯಾರೂಪದಲ್ಲಿ ಹೊರಗೆ ವ್ಯಕ್ತವಾಗಬಹುದು. ಆದ್ದರಿಂದ ಅವುಗಳನ್ನು ಕೇವಲ ಹೂಳಿದರೆ ಸಾಲದು, ಜ್ಞಾನಾಗ್ನಿಯಲ್ಲಿ ದಹಿಸಿಬಿಡಬೇಕು. ◆